**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 2078/2022**

**ಚಾ.ಸಾ.** 1

**ಪ್ರಾ.ಸಾ.** 3

**ದಿನಾಂಕಃ07.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಅನುಶ |
| ತಂದೆಃ ಗಂಡನ ಹೆಸರು | ಗಣಪತಿ ಉಣಕಲಕರ್ |
| ಉದ್ಯೋಗ | -- |
| ವಯಸ್ಸು | 22 |
| ವಾಸಸ್ಥಳ | ಕಲಘಟಗಿ |

**ಪ್ರಾರಂಭ ಸಮಯಃ 12.45. ಪಿ ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ನನಗೆ ಚಾಸಾ8 ನನ್ನ ತಾಯಿ. ಚಾಸಾ4, 5, 9 ರಿಂದ 11 ಗೊತ್ತು. ಚಾಸಾ4 ಗೊತ್ತಿಲ್ಲ. ಆಪಾದಿತ ಗೊತ್ತಿಲ್ಲ. ಮೃತ ಗಣಪತಿ ಉಣಕಲಕರ್ ನನ್ನ ತಂದೆ.

ಸಾಕ್ಷಿಗೆ ದಿಃ18.06.2022 ರ ದೂರನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ6 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ6(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ1 ರಿಂದ 3 ನ್ನು ತೋರಿಸಲಾಗಿ, ಅವುಗಳಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಹಿಗಳನ್ನು ನಿಪಿ1(ಸಿ), 2(ಸಿ) ಮತ್ತು 3(ಸಿ) ಎಂದು ಗುರುತಿಸಲಾಯಿತು.

ದಿಃ12.06.2022 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ತಡಸ ಕ್ರಾಸ್ ಬಳಿ ನನ್ನ ತಂದೆಗೆ ರಸ್ತೆಯ ಅಪಘಾತವಾಗಿರುವ ವಿಚಾರವನ್ನು ನನಗೆ ಯಾರೊ ಕರೆ ಮಾಡಿ ತಿಳಿಸಿದ ಮೇರೆಗೆ ನಾನು ನನ್ನ

ತಂದೆಯನ್ನು ನೋಡಲು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಹೋಗಿದ್ದೆ. ನನ್ನ ತಂದೆಗೆ ತಲೆಗೆ ಮತ್ತು ಕೈ ಕಾಲುಗಳಿಗೆ ಬಾರಿ ಪ್ರಮಾಣದ ಗಾಯಗಳು ಆಗಿದ್ದವು. ನಂತರ ದಿಃ 17.06.2022 ರಂದು ನನ್ನ ತಂದೆ ಸದರಿ ಗಾಯಗಳಿಂದ ಉಪಚಾರ ಫಲಿಸದೇ ಮರಣ ಹೊಂದಿರುತ್ತಾರೆ. ಅಪಘಾತಪಡಿಸಿದ ವಾಹನ ಮತ್ತು ಚಾಲಕ ಯಾರು ಎಂದು ಗೊತ್ತಿಲ್ಲ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ಗೊತ್ತಿಲ್ಲ. ನಂತರ ನಾನು ದಿಃ 18.06.2022 ರಂದು ಪೊಲೀಸರ ಸೂಚನೆ ಮೇರೆಗೆ ನಿಪಿ6 ನ್ನು ದಾಖಲಿಸಿರುತ್ತೇನೆ. ಸದರಿ ಸಮಯದಲ್ಲಿ ಪೊಲೀಸರು ನಿಪಿ1 ರಿಂದ 3 ದಾಖಲೆಗಳಿಗೆ ನನ್ನ ಸಹಿಗಳನ್ನು ಪಡೆದುಕೊಂಡರು. ಪೊಲೀಸರು ಅಪಘಾತವಾದಂತಹ ಜಾಗದಲ್ಲಿ ಪಂಚನಾಮೆಯನ್ನು ಜರುಗಿಸಿರುವ ಬಗ್ಗೆ ಗೊತ್ತಿಲ್ಲ.

**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ ರವರಿಗೆ ಪಾಟೀಸವಾಲು ಮಾಡಲು ಅವಕಾಶ ನೀಡಲಾಯಿತು.**

ದಿಃ 12.06.2022 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ನನ್ನ ತಂದೆಗೆ ಅಪಘಾತವಾಗಿತ್ತು ಎಂದರೆ ಸರಿ. ಅಪಘಾತದ ವಿಚಾರವನ್ನು ನನಗೆ ಪ್ರಾಸಾ 1 ರವರು ತಿಳಿಸಿದರು ಎಂದರೆ ಗೊತ್ತಿಲ್ಲ. ನಾನು ನೇರವಾಗಿ ಕಲಘಟಗಿಯ ಸರ್ಕಾರಿ ಆಸ್ಪತ್ರೆಗೆ ಹೋದೆ ಎಂದರೆ ಸರಿಯಲ್ಲ. ಅಲ್ಲಿ ನನ್ನ ತಂದೆಗೆ ಉಪಚಾರ ನೀಡುತ್ತಿದ್ದರು ಎಂದರೆ ಸರಿಯಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ನನ್ನ ತಂದೆಯನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಗೊತ್ತಿಲ್ಲ. ನನ್ನ ತಂದೆಗೆ ತಲೆಯ ಹಿಂಭಾಗಕ್ಕೆ ಬಾರಿ ಗಾಯವಾದ ಕಾರಣ ಉಪಚಾರ ಫಲಿಸದೇ ಮರಣ ಹೊಂದಿದ್ದರು ಎಂದರೆ ಸರಿ. ಈ ದಿನ ನ್ಯಾಯಾಲಯದ ಮುಂದೆ ಇರುವ ಆಪಾದಿತನು ತನ್ನ ವಾಹನ ಸಂಖ್ಯೆ ಕೆಎ 23-ಎಮ್-6045 ನ್ನು ಅಜಾಗರೂಕತೆಯಿಂದ ಚಾಲನೆ ಮಾಡಿದ ಕಾರಣದಿಂದಾಗಿ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಗೊತ್ತಿಲ್ಲ.

ನಂತರ ನಾನು ನಿಪಿ6 ನ್ನು ದಾಖಲಿಸಿದೆ ಎಂದರೆ ಸರಿ. ನಂತರ ಪೊಲೀಸರು ಅಪಘಾತ ಸ್ಥಳಕ್ಕೆ ಬಂದು ನಾನು ತೋರಿಸಿದ ಜಾಗದಲ್ಲಿ ಪ್ರಾಸಾ1 ಮತ್ತು 2 ರವರ ಸಮಕ್ಷಮ ನಿಪಿ1 ರಂತೆ ಪಂಚನಾಮೆಯನ್ನು ಜರುಗಿಸಿ ನಿಪಿ2 ರಂತೆ ನಕಾಶೆಯನ್ನು ತಯಾರು ಮಾಡಿದರು ಎಂದರೆ ಸರಿಯಲ್ಲ. ನಂತರ ಅದೇ ದಿನ ಪ್ರಾಸಾ1 ಮತ್ತು 2 ರವರ ಸಮಕ್ಷಮ ನಿಪಿ3 ರಂತೆ ವಾಹನ ತಡೆ ಪಂಚನಾಮೆಯನ್ನು ಜರುಗಿಸಿ ಅಪಘಾತ ಪಡಿಸಿದ ವಾಹನವನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಗೊತ್ತಿಲ್ಲ. ನಿಪಿ1 ನ್ನು ಬರೆಯುವ ಕಾಲಕ್ಕೆ ನಿಪಿ4 ಮತ್ತು 5 ರಂತೆ ಭಾವಚಿತ್ರಗಳನ್ನು ತೆಗೆಯಲಾಯಿತು ಎಂದರೆ ಗೊತ್ತಿಲ್ಲ.

ಪರಿಹಾರಕ್ಕಾಗಿ ನಾನು ಅರ್ಜಿ ಸಲ್ಲಿಸಿದ್ದು ಅದು ಊರ್ಜಿತಗೊಂಡಿದೆ ಎಂದರೆ ಸರಿ. ಆಪಾದಿತನಿಂದ ಸದರಿ ಪರಿಹಾರದ ಹಣವನ್ನು ಪಡೆದುಕೊಂಡು ನಿಪಿ1 ರಿಂದ 6 ರಲ್ಲಿರುವ ಅಂಶಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆಪಾದಿತನ ಪರ ಶ್ರೀ.ಎಸ್ ಆರ್ ಹೆಚ್ ವಕೀಲರು ಪಾಟೀಸವಾಲು ಇಲ್ಲ ಎಂದು ನುಡಿದರು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**